<u>**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ., ನ್ಯಾಯಾಲಯ ಅಥಣಿ**</u>

**ಓ.ಎಸ್.ನಂ.418/2017** **ದಿನಾಂಕಃ 14.10.2025**

**ಡಿ.ಡಬ್ಲೂಃ 1**

---

**14.10.2025: ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

*********

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಮ್ ಕೆ ಎಸ್ ವಕೀಲರಿಂದಃ</u>

ನಾವು ಖರೀದಿ ತೆಗೆದುಕೊಳ್ಳುವ ಪೂರ್ವದಲ್ಲಿ ಪ್ರತಿವಾದಿ ನಂ.11 ರಿಂದ 13 ಇವರು ತಮ್ಮ ತಮ್ಮಲ್ಲಿಯೆ ಅಪಸಾತ್ (ನಿಪಿ-4) ಡಿಕ್ರಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಡಿಕ್ರಿ ಮಾಡಿಕೊಂಡಿದ್ದರ ಬಗ್ಗೆ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಆ ಡಿಕ್ರಿ ಪ್ರಕಾರ ಅಪ್ಪಾಸಾಬ ಅಂದರೆ ನನಗೆ ಖರೀದಿ ಕೊಟ್ಟಿರುವ ವ್ಯಕ್ತಿಯು ಮಾಲೀಕನಾದ ಎಂದರೆ ಸರಿ. 9 ನೇ ಪ್ರತಿವಾದಿಗೆ ನಾಲ್ಕು ಜನ ಮಕ್ಕಳಿರುತ್ತಾರೆ. ಶಾಲವ್ವನೂ ಸಹ ಅಂದರೆ 12 ನೇ ಪ್ರತಿವಾದಿ ಲಕ್ಷ್ಮಣನ ಮಗಳಾಗಿರುತ್ತಾಳೆ ಎಂದರೆ ಸರಿ. 7 ನೇ ಪ್ರತಿವಾದಿಗೆ ಶಾಮು, ಸದಾಶಿವ, ರಾಮು ಎಂಬ ಸಹೋದರರು ಮತ್ತು ಚಂದ್ರವ್ವ ಎಂಬ ಸಹೋದರಿ ಇರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಯರ ಮಕ್ಕಳಾದ ಪ್ರತಿವಾದಿ ನಂ.8, 11, 12 ಮತ್ತು 13 ಇವರ ನಡುವೆ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಣ ಸಹೊದರ ನಡುವೆ ಅಸಲ ದಾವಾ ನಂ.330 ರಲ್ಲಿ ಡಿಕ್ರಿ ಆಗುವ ಮುಂಚೆ ಪಾಲು ವಾಟ್ನಿ ಆಗಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ಲಕ್ಷ್ಮಣನ ಸಹೋದರನಾದ ರಾಮು ಇವನು ಮಗಳಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ 7 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇರದೆ ಅವನ ಸಹೋದರನಾದ ರಾಮು ಇವನಿಗೂ ಸಹ ಆಸ್ತಿಯಲ್ಲಿ ಹಕ್ಕು ಇತ್ತು ಎಂದರೆ ಸರಿಯಲ್ಲ.

2. ರಾಮು ಯಾವಾಗ ತೀರಿಕೊಂಡ ಎಂದರೆ ನನಗೆ ಗೊತ್ತಿಲ್ಲ. ರಾಮು ಇವನು 2000 ನೇ ಇಸ್ವಿಗಿಂತ ಮೊದಲೇ ತೀರಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ರಾಮು ತೀರಿಕೊಂಡಿದ್ದರ ಗೈರು ಫಾಯದೆ ತೆಗೆದುಕೊಂಡು ಅಸಲ ದಾವಾ ನಂ.330 ರಲ್ಲಿ ಡಿಕ್ರಿ ತೆಗೆದುಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಅಪ್ಪಸಾಬ ಡಿಕ್ರಿ ಪಡೆದಿರುತ್ತಾನೆ ಎಂದು ನುಡಿಯುತ್ತಾರೆ. ಖರೀದಿ ತೆಗೆದುಕೊಂಡ ಆಸ್ತಿಯಲ್ಲಿ ರಾಮು ಇವನಿಗೂ ಸಹ ಹಕ್ಕು ಇದ್ದು ಅವನ ಮರಣಾನಂತರ ಅವನ ಹಕ್ಕು ವಾದಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಬಾಬು ರಾಮು ಹುಲ್ಯಾಳ ಇವನೊಂದಿಗೆ ಸೇರಿ ಖೊಟ್ಟಿ ಡಿಕ್ರಿಯನ್ನು ಪಡೆದುಕೊಂಡು ಖೊಟ್ಟಿ ಖರೀದಿ ಪತ್ರದ ಮೂಲಕ ಉತಾರದಲ್ಲಿ ಹೆಸರನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿ ತೆಗೆದುಕೊಂಡ ಆಸ್ತಿಗೆ ಅಪ್ಪಸಾಬ ಸಂಪೂರ್ಣ ಮಾಲೀಕನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ತೆಗೆದುಕೊಂಡ ಆಸ್ತಿಯಲ್ಲಿ ವಾದಿಗೆ ಹಕ್ಕು ಇರುತ್ತದೆ

ಎಂದರೆ ಸರಿಯಲ್ಲ. ಖೊಟ್ಟಿ ಖರೀದಿ ಪತ್ರದ ಆಧಾರದ ಮೇಲೆ ಸುಳ್ಳು ಪ್ರಮಾಣ ಪತ್ರ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಇದೆ.

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ., ನ್ಯಾಯಾಲಯ ಅಥಣಿ.